ಐಷಾರಾಮಿ ಕಾರು ಕಳ್ಳರಿಬ್ಬರ ಬಂಧನ

ಬೆಂಗಳೂರು: ಐದು ರಾಜ್ಯದ ಪೊಲೀಸರಿಗೆ ಬೇಕಾಗಿದ್ದ ಐಷಾರಾಮಿ ಕಾರು ಕಳ್ಳರಿಬ್ಬರನ್ನು ಪರಪ್ಪನ ಅಗ್ರಹಾರ ಠಾಣೆ ಪೊಲೀಸರು ಬಂಧಿಸಿದ್ದಾರೆ. ರಾಜಸ್ಥಾನ ಮೂಲದ ಸತ್ಯೇಂದ್ರ ಸಿಂಗ್ ಶೇಖಾವತ್ (45), ನವದೆಹಲಿ ಮೂಲದ ಪ್ರಮೀಳಾ ಠಾಕೂರ್ (25) ಬಂಧಿತರು. ಆರೋಪಿಗಳಿಂದ 35 ಲಕ್ಷ ರೂ. ಮೌಲ್ಯದ ಫಾರ್ಚುನರ್ ಕಾರನ್ನು ವಶಪಡಿಸಿಕೊಳ್ಳಲಾಗಿದೆ. ಹೊಸೂರು ರಸ್ತೆಯ ಸಿಂಗಸಂದ್ರದಲ್ಲಿನ ಹೋಟೆಲ್ ವೊಂದರ ಮುಂದೆ ನಿಲ್ಲಿಸಿದ್ದ ಕಾರನ್ನು ಜೂ. 26ರಂದು ಕಳ್ಳತನ ಮಾಡಿದ್ದರು. ಈ ಸಂಬಂಧ ಸಂತ್ರಸ್ತರು ಠಾಣೆಯಲ್ಲಿ ದೂರು ದಾಖಲಿಸಿದ್ದರು. ಸಿಸಿ ಕ್ಯಾಮರಾ ದೃಶ್ಯಾವಳಿ ಮೂಲಕ ಆರೋಪಿಗಳ ಕುರುಹು ಪತ್ತೆ ಮಾಡಿ ಜು.17ರಂದು ಬೆಳಗಾವಿ ಮತ್ತು ಪುಣೆ ರಾಷ್ಟ್ರೀಯ ಹೆದ್ದಾರಿಯ ಖರಾದ್ ಬಳಿ ಪೊಲೀಸರು ಬಂಧಿಸಿ, ಬೆಂಗಳೂರಿಗೆ ಕರೆತಂದು ವಿಚಾರಣೆ ನಡೆಸಿದ್ದರು. ನಕಲಿ ಬೀಗದ ಕೀಯನ್ನು ಬಳಸಿ ಕಾರಿನ ಡೋರ್ ತೆರೆದು, ಚಾಲನೆ ಮಾಡಿಕೊಂಡು ರಾಜಸ್ಥಾನಕ್ಕೆ ಒಯ್ದು ಪರಿಚಯಸ್ಥರಿಗೆ ಮಾರಾಟ ಮಾಡಿದ್ದಾಗಿ ಆರೋಪಿಗಳು ತಿಳಿಸಿದ್ದಾರೆ.

ಐಷಾರಾಮಿ ಕಾರು ಕಳ್ಳತನವನ್ನೇ ದಂಧೆಯಾಗಿಸಿಕೊಂಡಿರುವ ಸತ್ಯೇಂದ್ರ ವಿರುದ್ಧ ಕರ್ನಾಟಕ ಸೇರಿ ವಿವಿಧ ರಾಜ್ಯಗಳಲ್ಲಿ 61 ಪ್ರಕರಣ ದಾಖಲಾಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಸತ್ಯೇಂದ್ರನ ಕಳ್ಳತನ ಕೃತ್ಯಕ್ಕೆ ದೆಹಲಿ ಮೂಲದ ಪ್ರಮಿಳಾ ಕೈಜೋಡಿಸುತ್ತಿದ್ದಳು. ಇಬ್ಬರೂ ಆಪ್ತ ಸ್ನೇಹಿತರಾಗಿದ್ದು, ಬಿಎಂಡಬ್ಲ್ಯು, ಫಾರ್ಚುನರ್, ಆಡಿ, ಲ್ಯಾಂಬೊರ್ಗಿನಿ ಸೇರಿ ಇತರೆ ಕಾರುಗಳನ್ನು ಕಳ್ಳತನ ಮಾಡಿ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದ್ದರು ಎಂಬುದು ತನಿಖೆಯಲ್ಲಿ ಬಯಲಾಗಿದೆ.

ಅಣ್ಣನನ್ನೇ ಕೊಂದು ಪಿಟ್ ಗುಂಡಿಯಲ್ಲಿ ಮುಚ್ಚಿದ!

ತುಮಕೂರು: ಒಂದೇ ಮನೆಯಲ್ಲಿ ವಾಸವಾಗಿದ್ದ ಅಣ್ಣನನ್ನು ತಮ್ಮನೇ ಕೊಲೆ ಮಾಡಿ ಶೌಚಗೃಹದ ಪಿಟ್ ಗುಂಡಿಯಲ್ಲಿ ಶವ ಹಾಕಿ ಮುಚ್ಚಿದ್ದಾನೆ ಎನ್ನಲಾದ ಪ್ರಕರಣ ಕುಣಿಗಲ್ ತಾಲೂಕು ಹುಲಿಯೂರುದುರ್ಗ ಠಾಣಾ ವ್ಯಾಪ್ತಿಯ ಬೆನವಾರ ಗ್ರಾಮದಲ್ಲಿ ಬೆಳಕಿಗೆ ಬಂದಿದೆ. ಬೆನವಾರ ಗ್ರಾಮದ ರಾಜಣ್ಣ ಅಲಿಯಾಸ್ ಬಾಂಬೆ ರಾಜಣ್ಣ (70) ಕೊಲೆಯಾದವರು. ಆತನ ಸಹೋದರ, ಗ್ರಾಪಂ ಮಾಜಿ ಸದಸ್ಯ ರಾಮದಾಸ್(65) ಆರೋಪಿ. ರಾಜಣ್ಣ ಈ ಹಿಂದೆ ಬಾಂಬೆ, ಬೆಂಗಳೂರಿನಲ್ಲಿ ವಾಸವಾಗಿದ್ದರು. ಬಳಿಕ ಹುಲಿಯೂರುದುರ್ಗದ ಬಾರ್‌ನಲ್ಲಿ ಕೆಲಸ ಮಾಡುತ್ತಿದ್ದಾಗ ಬಿದ್ದು ಕಾಲು ಮುರಿದುಕೊಂಡಿದ್ದರು. ಕಳೆದ ಎರಡು ತಿಂಗಳಿಂದ ಸಹೋದರ ರಾಮದಾಸ್ ಜತೆ ಒಂದೇ ಮನೆಯಲ್ಲಿ ವಾಸವಾಗಿದ್ದರು.

ಎಸ್‌ಐಆರ್ ಸ್ಥಳಾಂತರ ಆದವರೇ 65 ಲಕ್ಷ ಮಂದಿ

ಮೊದಲನೇ ಪುಟದಿಂದ...

ಅವರೆಲ್ಲರ ಹೆಸರು ಮತದಾರರ ಪಟ್ಟಿಯಲ್ಲಿ ಬರುತ್ತದೆ. ಇದೇ ವೇಳೆ ಕರಡು ಪಟ್ಟಿಯಿಂದ ಹೊರಗುಳಿಯಲು ತಿಳಿಸಿರುವ ಐದು ಕಾರಣಗಳ ಕುರಿತು ರಾಜಕೀಯ ಪಕ್ಷಗಳಲ್ಲಿ ವ್ಯಾಪಕ ವಿಶ್ಲೇಷಣೆ ನಡೆದಿದೆ. ಪ್ರಮುಖವಾಗಿ ಬೆಂಗಳೂರು ವ್ಯಾಪ್ತಿ ಯಲ್ಲಿ ದೊಡ್ಡ ಪ್ರಮಾಣದಲ್ಲಿ ಮತದಾರರು ಪಟ್ಟಿಯಿಂದ ಹೊರಗುಳಿಯುತ್ತಿದ್ದಾರೆ. ಜತೆಗೆ ಪ್ರತಿ ವಿಧಾನಸಭಾ ಕ್ಷೇತ್ರದ ಅಂಕಿಅಂಶವನ್ನೂ ಆಯೋಗ ಹೊರಹಾಕಿದೆ. ಜತೆಗೆ ಎರಡನೇ ಚರಣದ ಪ್ರಕ್ರಿಯೆಗಾಗಿ ತರಬೇತಿ ಚಟುವಟಿಕೆಯನ್ನೂ ಆರಂಭಿಸಿದೆ.

ಕರಡು ಪಟ್ಟಿಗೆ ಸೇರದವರು

ಬೆಂಗಳೂರು ದಕ್ಷಿಣ	3,63,792
ಮಹದೇವಪುರ	2,96,029
ಬೊಮ್ಮನಹಳ್ಳಿ	2,65,894
ಕೆ.ಆರ್. ಪುರ	2,58,998
ದಾಸರಹಳ್ಳಿ	2,45,729
ರಾಜರಾಜೇಶ್ವರಿ ನಗರ	2,45,468
ಯಶವಂತಪುರ	2,40,023
ಬ್ಯಾಟರಾಯನಪುರ	2,26,955
ಆನೇಕಲ್	1,73,041
ಯಲಹಂಕ	1,71,876
ಸರ್ವಜ್ಞನಗರ	1,70,702
ವಿಜಯನಗರ	1,64,122
ಗೋವಿಂದರಾಜನಗರ	1,48,927
ಬಿ.ಟಿ.ಎಮ್ ಲೇಔಟ್	1,45,564
ಸಿ.ವಿ. ರಾಮನ್ ನಗರ	1,40,171

ಮಲೆನಾಡು- ಕರಾವಳಿ ಕಡಿಮೆ: ರಾಜ್ಯದ ಇತರ ಭಾಗಗಳಿಗೆ ಹೋಲಿಸಿದರೆ ಮಲೆನಾಡು ಹಾಗೂ ಕರಾವಳಿ ಭಾಗದ ಜಿಲ್ಲೆಗಳಲ್ಲಿ ಎಎಸ್‌ಡಿಡಿಒ (ಕರಡು ಪಟ್ಟಿಗೆ ಸೇರದವರು) ಪ್ರಕರಣಗಳ ಸಂಖ್ಯೆ ತೀರಾ ಕಡಿಮೆಯಿದೆ. ದತ್ತಾಂಶದ ಪ್ರಕಾರ, ರಾಜ್ಯದಲ್ಲೇ ಅತ್ಯಂತ ಕಡಿಮೆ ಪ್ರಕರಣಗಳು ಕೊಡಗು ಜಿಲ್ಲೆಯಲ್ಲಿ ದಾಖಲಾಗಿದ್ದು, ಅಲ್ಲಿ ಕೇವಲ 62,854 ಪ್ರಕರಣ ಗಳಿವೆ. ಉಡುಪಿ ಜಿಲ್ಲೆಯಲ್ಲಿ 63,331 ಪ್ರಕರಣ ಇವೆ.

ರಾಜಧಾನಿಯಲ್ಲಿ ಬಿಜೆಪಿಗೆ ಶಾಕ್!: ಬೆಂಗಳೂರಿನ 1.03 ಕೋಟಿ ಮತದಾರರ ಪೈಕಿ ಬರೋಬ್ಬರಿ 46.88 ಲಕ್ಷ ಮತದಾರ ರನ್ನು ಅಂದರೆ ಶೇ. 45ರಷ್ಟನ್ನು ಗೈರುಹಾಜರಾದವರು, ಸ್ಥಳಾಂತರ ಗೊಂಡವರು, ಮೃತಪಟ್ಟವರು, ನಕಲಿ ಹಾಗೂ ಇತರೆ (ಎಎಸ್‌ಡಿಡಿಒ) ಪಟ್ಟಿಯಲ್ಲಿ ಸೇರಿಸಲಾಗಿದೆ. ರಾಜ್ಯದ ಇತರ ಭಾಗಗಳಿಗೆ ಹೋಲಿಸಿದರೆ ರಾಜಧಾನಿಯಲ್ಲಿ ಈ ಸಂಖ್ಯೆ ಅತ್ಯಂತ ಅಧಿಕವಿದೆ. ಅಂದಹಾಗೆ ರಾಜಧಾನಿ ಬೆಂಗಳೂರಿನಲ್ಲಿ ಮತದಾರರ ಪಟ್ಟಿಯಿಂದ ಹೊರಗುಳಿಯುವ ಭೀತಿ ಎದುರಿಸುತ್ತಿರುವ ಒಟ್ಟು ಮತದಾರರ ಪೈಕಿ ಸುಮಾರು ಶೇ.59ರಷ್ಟು ಭಾಗ ಬಿಜೆಪಿ ಶಾಸಕರು ಇರುವ ಕ್ಷೇತ್ರಗಳಿಗೇ ಸೇರಿದೆ ಎಂಬುದು ವಿಶೇಷ. ಬೆಂಗಳೂರಿನ 15 ಬಿಜೆಪಿ ಶಾಸಕರು ಇರುವ ಕ್ಷೇತ್ರಗಳಿಂದಲೇ ಬರೋಬ್ಬರಿ 27.69 ಲಕ್ಷ ಮತದಾರರು ಈ ಪಟ್ಟಿಯಲ್ಲಿದ್ದಾರೆ. ಕಾಂಗ್ರೆಸ್ ಶಾಸಕರ ಪ್ರಾಬಲ್ಯ ವಿರುವ 12 ಕ್ಷೇತ್ರಗಳಿಂದ 16.79 ಲಕ್ಷ ಮತದಾರರು ಎಎಸ್‌ಡಿಡಿಒ ಪಟ್ಟಿಯಲ್ಲಿ ಗುರುತಿಸಲ್ಪಟ್ಟಿದ್ದಾರೆ. ಕ್ಷೇತವಾರು ವಿಶ್ಲೇಷಣೆ ನಡೆಸಿದಾಗ, ಬಿಜೆಪಿ ಶಾಸಕ ಎಂ. ಕೃಷ್ಣಪ್ಪ ಪ್ರತಿನಿಧಿಸುವ ಬೆಂ. ದಕ್ಷಿಣ ಕ್ಷೇತ್ರದಲ್ಲಿ ಅತಿಹೆಚ್ಚು ಅಂದರೆ 3.63 ಲಕ್ಷ ಮಂದಿ ಈ ಪಟ್ಟಿಯಲ್ಲಿದ್ದಾರೆ. ಇದಕ್ಕೆ ತದ್ವಿರುದ್ಧವಾಗಿ, ಸಚಿವ ರಿಜ್ವಾನ್ ಅರ್ಷದ್ ಪ್ರತಿನಿಧಿಸುವ ಶಿವಾಜಿನಗರ ಕ್ಷೇತ್ರದಲ್ಲಿ ಕಡಿಮೆ ಅಂದರೆ 81,236 ಮತದಾರರು ಪಟ್ಟಿಯಲ್ಲಿದ್ದಾರೆ.

ಕಲಬುರಗಿ, ಬೆಳಗಾವಿ ಹೆಚ್ಚು

ರಾಜಧಾನಿಯನ್ನು ಹೊರತುಪಡಿಸಿದರೆ, ಉತ್ತರ ಕರ್ನಾಟಕದ ಪ್ರಮುಖ ಜಿಲ್ಲೆಗಳಲ್ಲಿ ಗಣನೀಯ ಪ್ರಮಾಣದ ಎಎಸ್‌ಡಿಡಿಒ ಪ್ರಕರಣಗಳು ಕಂಡುಬಂದಿವೆ. ಪ್ರಮುಖವಾಗಿ ಕಲಬುರಗಿ ಜಿಲ್ಲೆಯಲ್ಲಿ 5,21,956 ಪ್ರಕರಣ ದಾಖಲಾಗಿದ್ದರೆ, ಗಡಿ ಜಿಲ್ಲೆ ಬೆಳಗಾವಿಯಲ್ಲಿ 5,13,438 ಎಎಸ್‌ಡಿಡಿಒ ಪ್ರಕರಣಗಳು ವರದಿಯಾಗಿವೆ.

ಬೆಂಗಳೂರು ಹೊರತುಪಡಿಸಿ ಅತಿ ಹೆಚ್ಚು ಪ್ರಕರಣಗಳಿರುವ ಕ್ಷೇತ್ರ

ಕಲಬುರಗಿ ಉತ್ತರ	1,05,256
ಕಲಬುರಗಿ ದಕ್ಷಿಣ	1,01,263
ನರಸಿಂಹರಾಜ	99,367
ಕೃಷ್ಣರಾಜ	86,801
ಚಾಮರಾಜ	85,853
ವಿಜಯಪುರ ನಗರ	79,736
ಬಳ್ಳಾರಿ ನಗರ	76,503

ಸುರಕ್ಷತಾ ಕೇಂದ್ರದಲ್ಲಿದ್ದ ಇಬ್ಬರು ಬಾಲಕರು ಪರಾರಿ

ಕೆಜಿಎಫ್: ನಗರದಲ್ಲಿ ಸ್ಥಾಪಿಸಲಾಗಿರುವ ಸುರಕ್ಷತಾ ಕೇಂದ್ರದಿಂದ (ಪ್ಲೇಸ್ ಆಫ್ ಸೇಫ್ಟಿ) ಇಬ್ಬರು ಬಾಲಕರು ಪರಾರಿಯಾಗಿರುವುದು ತಡವಾಗಿ ಬೆಳಕಿಗೆ ಬಂದಿದೆ. ಪ್ರತಿ ಕೊಠಡಿಗೂ ಶೌಚಗೃಹ ಸೇರಿ ಮೂಲಸೌಕರ್ಯ ಕಲ್ಪಿಸಲಾಗಿದೆ. ಮಕ್ಕಳ ಚಲನವಲನಗಳ ಮೇಲೆ ಸದಾ ಹದ್ದಿನ ಕಣ್ಣಿಡಲು ಹಾಗೂ ಅವರಿಗೆ ಸುರಕ್ಷಿತ ವಾತಾವರಣ ನಿರ್ಮಿಸಲು ಭದ್ರತಾ ಸಿಬ್ಬಂದಿ ನೇಮಿಸಲಾಗಿದೆ. ಸಿಬ್ಬಂದಿ ಕರ್ತವ್ಯದಲ್ಲಿದ್ದಾಗಲೇ ಬಾಲಕರು ಪರಾರಿಯಾಗಿದ್ದಾರೆ.

ಗುಂಡಿ ಮಾತ್ರವಲ್ಲ, ಹೊಣೆಗಾರ ಸಂಸ್ಥೆಯೂ ಪತ್ತೆ!

ಬೆಂಗಳೂರು: ನಗರದ ಸಾಫ್ಟ್‌ವೇರ್ ಇಂಜಿನಿಯರ್ ಒಬ್ಬರು ಕೃತಕ ಬುದ್ಧಿಮತ್ತೆ (ಎಐ) ಆಧಾರಿತ ಆ್ಯಪ್ ಅಭಿವೃದ್ಧಿಪಡಿಸಿದ್ದು, ಅದು ರಸ್ತೆಯ ಗುಂಡಿಗಳ ಫೋಟೊ ಅಥವಾ ವಿಡಿಯೋವನ್ನು ಅಪ್‌ಲೋಡ್ ಮಾಡಿದರೆ, ಆ ಗುಂಡಿಯ ಗಾತ್ರ ಹಾಗೂ ತೀವ್ರತೆಯನ್ನು ವಿಶ್ಲೇಷಿಸುತ್ತದೆ. ಜತೆಗೆ, ಜಿಯೋಟ್ಯಾಗಿಂಗ್ ನೆರವಿನಿಂದ ರಸ್ತೆಯು ಜಿಬಿಎ, ಬಿಎಂಆರ್‌ಸಿಎಲ್ ಅಥವಾ ಬಿಡಬ್ಲ್ಯೂಎಸ್ ಎಸ್‌ಬಿ ವ್ಯಾಪ್ತಿಗೆ ಸೇರಿದ್ದೇ ಎಂಬುದನ್ನೂ ಗುರುತಿಸುತ್ತದೆ. ಇದರಿಂದ ಸಮಸ್ಯೆ ಪರಿಹರಿಸಬೇಕಾದ ಸಂಬಂಧಪಟ್ಟ ಇಲಾಖೆ ಅಥವಾ ಅಧಿಕಾರಿಗೆ ನೇರವಾಗಿ ದೂರು ಸಲ್ಲಿಸಲು ಅನುಕೂಲವಾಗಲಿದೆ. ಸದ್ಯ ಈ ಆ್ಯಪ್ 'ಎಕ್ಸ್' ಸಾಮಾಜಿಕ ಜಾಲತಾಣದಲ್ಲಿ ಗಮನ ಸೆಳೆದಿದ್ದು, ನೆಟ್ಟಿಗರಿಂದ ಮೆಚ್ಚುಗೆ ವ್ಯಕ್ತವಾಗಿದೆ. ರಸ್ತೆ ಗುಂಡಿಗಳ ಸಮಸ್ಯೆ ವಿರುದ್ಧ ಸಾರ್ವಜನಿಕರ ಹೋರಾಟಕ್ಕೆ ಇದು ಪರಿಣಾಮಕಾರಿ ಸಾಧನವಾಗಲಿದೆ ಎಂಬ ಅಭಿಪ್ರಾಯವೂ ಕೇಳಿಬಂದಿದೆ.

25 ತಾಸು ದಾಸರ ಪದ ಗಾಯನ

ಮಂಗಳೂರು: ಸಂಗೀತ ಕ್ಷೇತ್ರದಲ್ಲಿ 25 ವರ್ಷಗಳ ಅನುಭವ ಹೊಂದಿರುವ ಆಕಾಶವಾಣಿಯ ಉನ್ನತ ಶ್ರೇಣಿಯ ಕಲಾವಿದೆ ಸಂಗೀತ ಬಾಲಚಂದ್ರ ಅವರು 25 ತಾಸು ನಿರಂತರವಾಗಿ ದಾಸರ ಪದಗಳನ್ನು ಹಾಡುವ ಮೂಲಕ ವಿಶ್ವದಾಖಲೆ ನಿರ್ಮಿಸುವ ಪ್ರಯತ್ನಕ್ಕೆ ಮುಂದಾಗಿದ್ದಾರೆ. ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್ ದಾಖಲೆ ಉದ್ದೇಶದೊಂದಿಗೆ 23ರಂದು ಈ ವಿಶಿಷ್ಟ ಗಾಯನ ಕಾರ್ಯಕ್ರಮ ಆಯೋಜಿಸಲಾಗಿದೆ.

ರೈಲು ಗಾಲಿ ಕಾರ್ಖಾನೆ
ಯೆಲಹಂಕ, ಬೆಂಗಳೂರು – 560 064
ವೆಬ್‌ಸೈಟ್: www.rwf.indianrailways.gov.in

ಇ – ಟೆಂಡರ್: ಭಾರತದ ರಾಷ್ಟ್ರಪತಿಗಳ ಪರವಾಗಿ, ರೈಲ್ ವೀಲ್ ಫ್ಯಾಕ್ಟರಿಯ ಪ್ರಧಾನ ಮುಖ್ಯ ಸಾಮಗ್ರಿ ವ್ಯವಸ್ಥಾಪಕರು, ಅನುಭವಿ ಹಾಗೂ ಪ್ರತಿಷ್ಠಿತ ಪೂರೈಕೆದಾರರು/ಗುತ್ತಿಗೆದಾರರಿಂದ ಕೆಳಕಂಡ ಇ-ಟೆಂಡರ್‌ಗಳನ್ನು ಭಾರತೀಯ ರೈಲ್ವೆಯ ಇ-ಪೋರ್ಟಲ್ www.ireps.gov.in ಮೂಲಕ ಆಹ್ವಾನಿಸಿದ್ದಾರೆ. ಟೆಂಡರ್ ದಾಖಲೆಗಳು ಹಾಗೂ ಟೆಂಡರ್‌ಗಳಿಗೆ ಸಂಬಂಧಿಸಿದ ಯಾವುದೇ ತಿದ್ದುಪಡಿಗಳು ಭಾರತೀಯ ರೈಲ್ವೆ ಇ-ಪೋರ್ಟಲ್ ನಲ್ಲಿ ಮಾತ್ರ ಲಭ್ಯವಿರುತ್ತವೆ.

ಟೆಂಡರ್ ನೋಟಿಸ್ ಸಂಖ್ಯೆ: ಆರ್ ಡಬ್ಲ್ಯೂ ಎಫ್/ಎಸ್/ಪಿ/10/2026–27, ದಿನಾಂಕ: 13.08.2026

ಕ್ರ.ಸಂ.	ಟೆಂಡರ್‌ಸಂಖ್ಯೆ	ಕೊನೆಯ ದಿನಾಂಕ	ಸಾಮಗ್ರಿಯ ಸಂಕ್ಷಿಪ್ತ ವಿವರ	ಪ್ರಮಾಣ
01	ಪಿ1262664	04/09/2026	ಸಿಲ್ವೆಗ್ ಇನ್ಸರ್ಟ್ ಎಲ್ ಪೆಕ್ ಸ್ಟಾನ್ 1504 ಇಪಿಎಲ್ ಗ್ರೆಡ್ ಪಿ–40, 0.3 mm ಎಂಡ 0.4 mm ಅಗಲದ ಸ್ಟಾರಲಲ್ ಸ್ಟ್ರಾಂಡ್ ಸಹಿತ	ಸಂಖ್ಯೆಗಳಲ್ಲಿ: 7,110
02	ಪಿ1262597	10/09/2026	ಲ್ಯಾಡಲ್ ಫ್ಲೈಂಗ್ ಗಾಗಿ ಆರ್ ಡಬ್ಲ್ಯೂ ಎಫ್ ವಿಶೇಷಣಗಳ ಪ್ರಕಾರ ಪ್ಲಾಸ್ಟಿಸಿಯ ಸ್ಟೈಲ್ ಟ್ರಕ್ ಸೆಟ್	183 ಸೆಟ್‌ಗಳು
03	ಪಿ1262453	30/10/2026	ಐಎಸ್ 1239/2004 ಮಾದರಿಯಂದ 20 mm ಹೊಂದಿರುವ ಎಂಎಸ್ ಟ್ಯೂಬ್ ಟ್ಯೂಬ್	96,832 ಮೀಟರ್
04	ಪಿ1262577	30/10/2026	ರಿ ಸೆಟಿಂಗ್ ಎಸ್ ಈ ಎಫ್ ಪಿ ಎಸ್ – 3ಗಾಗಿ ಕೋಟೆಡ್ ಇನ್ಸರ್ಟ್ ಗಳು – 42807 ಆರ್ 001	ಸಂಖ್ಯೆಗಳಲ್ಲಿ: 3,800
05	ಪಿ1262454	02/11/2026	ಆರ್ ಡಬ್ಲ್ಯೂ ಎಫ್ ವಿಶೇಷಣಗಳ ಪ್ರಕಾರ ಆಲ್ಯೂಮಿನಿಯಮ್ ರಂಬಾಕ್/ ಪೆರಿಶ್ ಸ್ಟ್ರಾಂಡ್ – ಎರಡೂ ಆಲ್ಯೂಮಿನಿಯಮ್ ಸ್ಟೀಲ್	284 ಸೆಟ್‌ಗಳು
06	ಪಿ1262451	23/11/2026	ಆರ್ ಡಬ್ಲ್ಯೂ ಎಫ್ ಡ್ರಾಯಿಂಗ್ 224872 ಪ್ರಕಾರ ಸ್ಪ್ರಿಂಗ್ ಸ್ಟೀಲ್	ಸಂಖ್ಯೆಗಳಲ್ಲಿ: 224
07	ಪಿ1262450	02/12/2026	ಆರ್ ಡಬ್ಲ್ಯೂ ಎಫ್ ವಿಶೇಷಣಗಳ ಪ್ರಕಾರ ಲ್ಯಾಡರ್ ಇನ್ಸುಲೇಷನ್ ಮೆಟೀರಿಯಲ್	4,81,950 ಕೆ.ಜಿ.
08	ಪಿ1262634	14/12/2026	ಆರ್ ಡಬ್ಲ್ಯೂ ಎಫ್ ವಿಶೇಷಣಗಳ ಪ್ರಕಾರ ಫೆರೋಸ್ ಮ್ಯಾಂಗನೀಸ್	7,77,400 ಕೆ.ಜಿ.
09	ಪಿ1262499	29/12/2026	ಆರ್ ಡಬ್ಲ್ಯೂ ಎಫ್ ವಿಶೇಷಣಗಳ ಪ್ರಕಾರ ಬಾಸರ್ ಕೊಟೆಡ್ ಎಲೆಕ್ಟ್ರಾಡ್	ಸಂಖ್ಯೆಗಳಲ್ಲಿ: 1,56,522

ಟೆಂಡರ್ ನೋಟಿಸ್ ಸಂಖ್ಯೆ: ಆರ್ ಡಬ್ಲ್ಯೂ ಎಫ್/ಎಸ್/146/2026–27/05, ದಿನಾಂಕ: 13.08.2026

ಟೆಂಡರ್ ಸಂಖ್ಯೆ	ಆರ್ ಡಬ್ಲ್ಯೂ ಎಫ್–ಎಸ್–ಆರ್ ಕ್ಯೂ–ಎಫ್ ಎ 2026 ಸ್ಟ್ಯಾಂಡ್	ಆರ್ ಡಬ್ಲ್ಯೂ ಎಫ್–ಎಸ್–ಆರ್ ಕ್ಯೂ – ಸಿ ಡಬ್ಲ್ಯೂ ಎಸ್ ನೇ ಸ್ಟ್ಯಾಂಡ್
ಟೆಂಡರ್ ಮುಕ್ತಾಯ ದಿನಾಂಕ ಮತ್ತು ಸಮಯ	03.09.2026 @ 15.00 ಗಂಟೆ	04.09.2026 @ 15.00 ಗಂಟೆ
ಕಾರ್ಯದ ವ್ಯಾಪ್ತಿ	ಆರ್ ಡಬ್ಲ್ಯೂ ಎಫ್ ನಿಂದ ಭಾರತದ ವಿವಿಧ ರೈಲ್ವೆ ಕಾನ್ಸಿಂಗಿಸ್ ಗಳಿಗೆ ಫ್ರೀಸ್ಟೈಲ್ ಆಕ್ಸಿಲ್ಸ್ ಸಾಗಾಣಿಕೆ	ಭಾರತೀಯ ರೈಲ್ವೆಯ ವಿವಿಧ ಸ್ಥಳಗಳಿಂದ ಬಳಕೆಗೆ ಅರ್ಹವಾದ ವೀಲ್ ಸೆಟ್‌ಗಳನ್ನು ಆರ್‌ಡಬ್ಲ್ಯೂಎಫ್‌ಗೆ ಸಾಗಾಣಿಕೆ.
ದೂರದ ವ್ಯಾಪ್ತಿ	500 ಕಿ.ಮೀ. ಮೇಲ್ಪಟ್ಟು 1,000 ಕಿ.ಮೀ.ವರೆಗೆ	500 ಕಿ.ಮೀ. ಮೇಲ್ಪಟ್ಟು 1,000 ಕಿ.ಮೀ.ವರೆಗೆ
ಪ್ರಮಾಣ	ಸುಮಾರು 1,900 ಮೆಟ್ರಿಕ್ ಟನ್	ಸುಮಾರು 1,100 ಮೆಟ್ರಿಕ್ ಟನ್
ಅಂದಾಜು ಟೆಂಡರ್ ಮೌಲ್ಯ	₹48,83,000/-	₹44,99,000/-
ಈಎಂಡಿ ಮೊತ್ತ	₹97,700/-	₹90,000/-
ಗುತ್ತಿಗೆ ಅವಧಿ	ಕೆಲಸ ಆರಂಭವಾದ ದಿನದಿಂದ 24 ತಿಂಗಳು	
ಇ–ಮೇಲ್:	workstendercell@gmail.com	

ಪ್ರಧಾನ ಮುಖ್ಯ ಸಾಮಗ್ರಿ ವ್ಯವಸ್ಥಾಪಕರು

ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ Union Bank of India
ಭಾರತ ಸರ್ಕಾರ ಕಾ ಉಪಕ್ರಮ A Government of India Undertaking
ವಲಯ ಕಚೇರಿ – ಬೆಂಗಳೂರು
#ಸಂಖ್ಯೆ 1/1, 2ನೇ ಮಹಡಿ, ಜೀವನ ಸಂಪಿಗೆ, 2ನೇ ಮುಖ್ಯ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 003. ಮೊ: 86019-40090

ಟೆಂಡರ್ ಸೂಚನೆ

ಬೆಂಗಳೂರಿನಲ್ಲಿರುವ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ವಲಯ ಕಚೇರಿಯು, ಬೆಂಗಳೂರು ವಲಯದ ಎಲ್ಲಾ ಪ್ರದೇಶಗಳ ಶಾಖೆಗಳು/ಕಚೇರಿಗಳು/ಎಟಿಎಂಗಳಿಗೆ (ಸಶಸ್ತ್ರವಲ್ಲದ/ಸಶಸ್ತ್ರ) ಭದ್ರತಾ ಸಿಬ್ಬಂದಿಯನ್ನು ಒದಗಿಸಲು ಪಿಎಸ್‌ಎಗಳ ಎಂಪನೇಲ್‌ಮೆಂಟ್‌ಗಾಗಿ ಸ್ಥಾಪಿತ ಖಾಸಗಿ ಭದ್ರತಾ ಸಂಸ್ಥೆಗಳಿಂದ ಸೀಲ್ಡ್ ಆಫರ್‌ಗಳನ್ನು ಆಹ್ವಾನಿಸುತ್ತದೆ. ಆರ್‌ಎಫ್‌ಪಿ ಡೌನ್‌ಲೋಡ್ ಮಾಡಲು ದಯವಿಟ್ಟು ನಮ್ಮ ವೆಬ್‌ಸೈಟ್ www.unionbankofindia.bank.in ಗೆ ಭೇಟಿ ನೀಡಿ.

ದಾಖಲೆಯನ್ನು ಸಲ್ಲಿಸಲು ಕೊನೆಯ ದಿನಾಂಕ 07/09/2026, 1600 ಗಂಟೆಗಳು.

ದಿನಾಂಕ : 18/08/2026
ಸ್ಥಳ: ಬೆಂಗಳೂರು
ಸಮರ್ಥ ಪ್ರಾಧಿಕಾರ

ವಿಜಯವಾಣಿ CLASSIFIEDS ಸಂಪರ್ಕಿಸಿ: 080-26257440 88844 32337

ಮಹಿಳಾ ಕೇರ್ ಟೇಕರ್ ಬೇಕಾಗಿದ್ದಾರೆ
ಬೆಂಗಳೂರಿನಲ್ಲಿರುವ 40 ಮಕ್ಕಳು ಹೊಂದಿರುವ ಹಾಸ್ಟಲ್‌ಗೆ ನಿವಾಸಿ ಆರೈಕೆ ಮಾಡುವವರು (Residential Caregiver) ಬೇಕಾಗಿದ್ದಾರೆ.
ಮಧ್ಯಾಹ್ನ 12:00 ರಿಂದ ಸಂಜೆ 7:00 ಗಂಟೆಯೊಳಗೆ ಸಂಪರ್ಕಿಸಿ: 98440 08827/94814 51170 ಮತ್ತು
ಉಚಿತ ಊಟ ಮತ್ತು ವಸತಿ ಸೌಲಭ್ಯ

ಕೆಲಸ ಖಾಲಿ ಇದೆ
ಕರ್ನಾಟಕದಾದ್ಯಂತ MNC ಕಂಪನಿಗಳಿಗೆ PUC, ITI, any ಡಿಗ್ರಿ ಆಗಿರುವವರು ಆಫೀಸ್ ಕೆಲಸಕ್ಕೆ 2386 ಹುದ್ದೆಗಳಿಗೆ ಬೇಕಾಗಿದ್ದಾರೆ
ಉಚಿತ ಊಟ ವಸತಿಯೊಂದಿಗೆ
ಸಂಬಳ + ಓಟಿ ರೂ.18,000–96,000
ಇಂದೇ ಸಂಪರ್ಕಿಸಿ : 6366759126

ಲಕ್ಷ್ಮಣರಾವ್ ಶಾಸ್ತ್ರಿಗುರೂಜಿ
9945919628
ಕೌಟುಂಬಿಕಕಲಹ, ದಾಂಪತ್ಯ ಸಮಸ್ಯ